# ಗೂಗಲ್ ಮ್ಯಾಪ್‌ನಲ್ಲಿ ಟೋಲ್ ದರ!




■ **ಶಶಿಕುಮಾರ್ ಸಿ.**

ರೂಟ್ ಮ್ಯಾಪ್ ಮತ್ತು ಲೊಕೇಷನ್ ಹುಡುಕಾಟಕ್ಕಾಗಿ ಹೆಚ್ಚು ಬಳಕೆಯಲ್ಲಿರುವ ‘ಗೂಗಲ್ ಮ್ಯಾಪ್’ನಲ್ಲಿ ಇನ್ನು ಮುಂದೆ ಟೋಲ್ ದರದ ಮಾಹಿತಿಯೂ ಲಭ್ಯವಾಗಲಿದೆ! ಟೋಲ್ ಸಂಗ್ರಹ ಕೇಂದ್ರಗಳ ಬಗ್ಗೆಯಷ್ಟೇ ಮಾಹಿತಿ ಒದಗಿಸುತ್ತಿರುವ ಗೂಗಲ್ ಮ್ಯಾಪ್ ಶೀಘ್ರವೇ ಆಯಾ ಟೋಲ್‌ಗಳಲ್ಲಿ ವಾಹನಗಳಿಗೆ ವಿಧಿಸಲಾಗುವ ಟೋಲ್ ದರದ ಮಾಹಿತಿಯನ್ನು ಒಳಗೊಳ್ಳಲಿದೆ. ಟೋಲ್ ಶುಲ್ಕದ ಮಾಹಿತಿ ಸೇರಿದಂತೆ ಹೊಸ ಫೀಚರ್ಸ್‌ಗಳನು ಗೂಗಲ್ ಅಭಿವೃದ್ಧಿಪಡಿಸಿದ್ದು, ಶೀಘ್ರವೇ ಅವುಗಳನ್ನು ಬಳಕೆದಾರರಿಗೆ ಮುಕ್ತಗೊಳಿಸಲಿದೆ.

ವಾಹನ ಸವಾರರಿಗೆ ಟೋಲ್ ಸಂಗ್ರಹ ಕೇಂದ್ರಗಳದ್ದೇ ದೊಡ್ಡ ತಲೆಬಿಸಿ. ವಾಹನವನ್ನು ರಸ್ತೆಗಿಳಿಸುವ ಮುನ್ನ ಡೀಸೆಲ್, ಪೆಟ್ರೋಲ್, ಬ್ಯಾಟರಿ ಚಾರ್ಜ್ ಪರಿಶೀಲನೆ ಎಷ್ಟು ಅತ್ಯವಶ್ಯಕವೋ ಫಾಸ್‌ಟ್ಯಾಗ್ ಖಾತೆಯಲ್ಲಿ ಸಾಕಷ್ಟು ಹಣವಿದೆಯೇ ಎಂಬುದನ್ನು ಖಾತರಿಪಡಿಸಿಕೊಳ್ಳುವುದೂ ಅಷ್ಟೇ ಅವಶ್ಯಕ. ಇದನ್ನು ಮರೆತರೆ ಟೋಲ್ ಕೇಂದ್ರಗಳಲ್ಲಿ ಸಿಬ್ಬಂದಿಯೊಂದಿಗೆ ಕಿರಿಕಿರಿ ತಪ್ಪಿದ್ದಲ್ಲ. ಹಾಗೆಯೇ ಯಾವ ಟೋಲ್ ಕೇಂದ್ರದಲ್ಲಿ ತಮ್ಮ ವಾಹನಗಳಿಗೆ ಎಷ್ಟು ಶುಲ್ಕ ವಿಧಿಸಲಾಗುತ್ತದೆ ಎಂಬ ಮಾಹಿತಿಯನ್ನು ಹೊಂದಿದ್ದರೆ ಇನ್ನೂ ಅನುಕೂಲ.

ಡಿಜಿಟಲ್ ಕಾಲದಲ್ಲಿ ಬಹುತೇಕ ಮಾಹಿತಿ ಬೆರಳತುದಿಯಲ್ಲಿ ಲಭ್ಯ. ಆದರೂ ಟೋಲ್ ದರದಂತಹ ಕೆಲ ಮಾಹಿತಿಗಳು ಡಿಜಿಟಲೀಕರಣ ಆಗದುಳಿದಿವೆ. ಹೆಚ್ಚು ಮಂದಿ ಬಳಸುತ್ತಿರುವ ಗೂಗಲ್ ಮ್ಯಾಪ್‌ನಲ್ಲಿ ಟೋಲ್ ಕೇಂದ್ರಗಳ ಟೋಲ್ ಶುಲ್ಕದ ಮಾಹಿತಿ ಲಭ್ಯವಿಲ್ಲದಿರುವುದು ಬಳಕೆದಾರರಿಗೆ ಇಷ್ಟು ದಿನ ಸಮಸ್ಯೆಯಾಗಿ ಕಾಡುತ್ತಿತ್ತು. ಈ ಸಮಸ್ಯೆಯನ್ನು ಮನಗಂಡಿರುವ ಗೂಗಲ್ ತನ್ನ ‘ಗೂಗಲ್ ಮ್ಯಾಪ್’ನಲ್ಲಿ ಟೋಲ್ ದರದ ಮಾಹಿತಿಯನ್ನು ಒದಗಿಸಲು ವಿಶೇಷ ಫೀಚರ್ಸ್ ಪರಿಚಯಿಸುತ್ತಿದೆ.

ಈಗಾಗಲೇ ಪ್ರಾಯೋಗಿಕ ಪರೀಕ್ಷೆಯನ್ನು ನಡೆಸಿರುವ ಗೂಗಲ್ ಒಂದೆರಡು ತಿಂಗಳಿನಲ್ಲೇ ಹೊಸ ಫೀಚರ್ಸ್ ಅನ್ನು ಬಿಡುಗಡೆಗೊಳಿಸಲಿದೆ. ಹೊಸ ಅಪ್‌ಡೇಟ್ ಅನ್ನು ಡೌನ್‌ಲೋಡ್ ಮಾಡಿಕೊಂಡರಷ್ಟೇ ಈ ಸೇವೆಯನ್ನು ಬಳಕೆದಾರರು ಪಡೆಯಬಹುದು. ಈ ಫೀಚರ್ಸ್‌ನಿಂದ ಪ್ರವಾಸಕ್ಕೆ ಪ್ಲಾನ್ ಮಾಡುವವರಿಗೆ ಹೆಚ್ಚು ಅನುಕೂಲ. ಯಾವ ಟೋಲ್ ಕೇಂದ್ರದಲ್ಲಿ ಎಷ್ಟು ಶುಲ್ಕವಿದೆ ಎಂಬುದನ್ನು ಮುಂಚಿತವಾಗಿಯೇ ತಿಳಿದು ಅದಕ್ಕೆ ತಕ್ಕಂತೆ ಹಣ ಹೊಂದಾಣಿಕೆ ಮಾಡಿಕೊಳ್ಳಲು ಹೊಸ ಅಪ್‌ಡೇಟ್ ನೆರವಾಗಲಿದೆ ಎಂದು ಗೂಗಲ್ ತಿಳಿಸಿದೆ.

ಭಾರತ ಸೇರಿದಂತೆ ಅಮೆರಿಕ, ಜಪಾನ್ ಮತ್ತು ಇಂಡೊನೇಷ್ಯಾ ಮತ್ತು ಇನ್ನಿತರ ದೇಶಗಳ ಸುಮಾರು 2,000 ರಸ್ತೆಗಳಲ್ಲಿ ಇರುವ ಟೋಲ್ ಕೇಂದ್ರಗಳ ಟೋಲ್ ಶುಲ್ಕದ ಮಾಹಿತಿಯು ಗೂಗಲ್ ಮ್ಯಾಪ್‌ನಲ್ಲಿ ಲಭ್ಯವಾಗಲಿದೆ. ಇನ್ನೂ ಹೆಚ್ಚಿನ ದೇಶಗಳು ಶೀಘ್ರದಲ್ಲೇ ಈ ಯೋಜನೆ ವ್ಯಾಪ್ತಿಗೆ ಒಳಪಡಲಿವೆ ಎಂದಿದೆ ಗೂಗಲ್.

ಪ್ರವಾಸದ ಸ್ಥಳಗಳ ಮಾಹಿತಿಯನ್ನು ಆ್ಯಪ್‌ನಲ್ಲಿ ನಮೂದಿಸಿದರೆ ಅದಕ್ಕಾಗುವ ಟೋಲ್ ವೆಚ್ಚದ ಅಂದಾಜು ಮೊತ್ತ ತಿಳಿಯಲಿದೆ. ಆ್ಯಪಲ್ ಅಥವಾ ಐಫೋನ್‌ನಲ್ಲಿ ಗೂಗಲ್ ಮ್ಯಾಪ್ ಬಳಕೆಯ ಕ್ರಮವನ್ನು ಇನ್ನಷ್ಟು ಸರಳಗೊಳಿಸಲು ಐಫೋನ್ ಆಪರೇಟಿಂಗ್ ಸಿಸ್ಟಂ (ಐಒಎಸ್) ಆಧಾರಿತ ಐಫೋನ್‌ನ ಬಳಕೆದಾರರಿಗೆ ಹೊಸ ನವೀಕರಣಗಳನ್ನು ಸಹ ಬಿಡುಗಡೆ ಮಾಡಲಿರುವ ಗೂಗಲ್, ಐಒಎಸ್ ಬಳಕೆದಾರರಿಗೆ ಪಿನ್ ಮಾಡಿದ ಟ್ರಿಪ್ ವಿಜೆಟ್, ಆ್ಯಪಲ್ ವಾಚ್‌ನಿಂದ ನೇರ ನ್ಯಾವಿಗೇಷನ್ ಮತ್ತು ಸಿರಿ ಮತ್ತು ಶಾರ್ಟ್‌ಕಟ್‌ಗಳ ಅಪ್ಲಿಕೇಶನ್‌ಗೆ ಗೂಗಲ್ ನಕ್ಷೆಗಳ ಇಂಟಿಗ್ರೇಷನ್ ಆಯ್ಕೆಯನ್ನೂ ಪರಿಚಯಿಸಿದೆ. ಹೊಸ ಪಿನ್ ಮಾಡಿದ ಟ್ರಿಪ್ ವಿಜೆಟ್‌ನ ಸಹಾಯದಿಂದ, ಬಳಕೆದಾರರು ತಮ್ಮ ಗೋ ಟ್ಯಾಬ್‌ನಲ್ಲಿ ಪಿನ್ ಮಾಡಿದ ಟ್ರಿಪ್‌ಗಳನ್ನು ಐಒಎಸ್ ಹೋಮ್ ಸ್ಕ್ರೀನ್‌ನಿಂದಲೇ ಪ್ರವೇಶಿಸಲು ಸಾಧ್ಯವಾಗುವಂತೆ ಅವಕಾಶ ಕಲ್ಪಿಸಲಾಗಿದ್ದು, ಇದರಿಂದ ನಿರ್ದೇಶನಗಳನ್ನು ಪಡೆಯಲು ಬಳಕೆದಾರರಿಗೆ ಇನ್ನಷ್ಟು ಸರಳವಾಗಲಿದೆ.

## ಟೋಲ್ ಶುಲ್ಕ ಪ್ರಕಟಣೆ ಹೇಗೆ?

ಯಾವುದೇ ಪ್ರಯಾಣದ ನಡುವೆ ಬರಲಿರುವ ಟೋಲ್ ಸಂಬಂಧಿತ ಮಾಹಿತಿಯನ್ನು ಸ್ಥಳೀಯ ಟೋಲಿಂಗ್ ಅಧಿಕಾರಿಗಳ ಸಹಾಯದಿಂದ ಗೂಗಲ್ ಮ್ಯಾಪ್ ಮುಂಚಿತವಾಗಿಯೇ ಸಂಗ್ರಹಿಸಿರುತ್ತದೆ.

ಅದೇ ಮಾಹಿತಿಯನ್ನು ಆ್ಯಪ್‌ನಲ್ಲಿ ಬಿತ್ತರಿಸಲಾಗುತ್ತದೆ. ಟೋಲ್ ಪಾಸ್ ಅಥವಾ ಇತರ ಪಾವತಿ ವಿಧಾನಗಳನ್ನು ಬಳಸುವಾಗ ಆಗಲಿರುವ ವೆಚ್ಚ, ಫಾಸ್‌ಟ್ಯಾಗ್ ಹೊರತಾದ ಟೋಲ್ ಶುಲ್ಕ, ವಾರದ ದಿನ ಮತ್ತು ನಿರ್ದಿಷ್ಟ ಸಮಯದಲ್ಲಿ ಟೋಲ್‌ಗೆ ಎಷ್ಟು ವೆಚ್ಚವಾಗಬಹುದು ಎಂಬ ಅಂಶಗಳ ಆಧಾರದ ಮೇಲೆ ಗೂಗಲ್ ಮ್ಯಾಪ್ ಅಂದಾಜು ಮೊತ್ತವನ್ನು ಒದಗಿಸುತ್ತದೆ. ಟೋಲ್ ಶುಲ್ಕದ ಜೊತೆಗೆ ಅದಕ್ಕಿರುವ ಹಲವು ಪರ್ಯಾಯ ಮಾರ್ಗಗಳ ಬಗ್ಗೆಯೂ ಗೂಗಲ್ ಮ್ಯಾಪ್ ತಿಳಿಸಲಿದೆ. ಟೋಲ್ ಸಂಗ್ರಹ ಕೇಂದ್ರಗಳುಳ್ಳ ರಸ್ತೆಯಲ್ಲಿ ಪ್ರಯಾಣಿಸಬೇಕೆ ಅಥವಾ ಹೆಚ್ಚು ಟೋಲ್ ಹೊಂದಿರದ ಮಾರ್ಗದಲ್ಲಿ ಪ್ರಯಾಣಿಸಬೇಕೆ ಎಂಬುದನ್ನು ನಿರ್ಧರಿಸಲು ಇದು ಅನುಕೂಲವಾಗಲಿದೆ.

## ಮಾಹಿತಿ ತಿಳಿಯುವುದು ಹೇಗೆ?

ಗೂಗಲ್ ಮ್ಯಾಪ್ ಅನ್ನು ತೆರೆದು ಅದರ ಬಲ ಮೂಲೆಯಲ್ಲಿರುವ ಮೂರು ಚುಕ್ಕೆಗಳ ಮೇಲೆ ಕ್ಲಿಕ್ಕಿಸಿದರೆ ‘ಅವೈಡ್ ಟೋಲ್ಸ್’ ಎಂಬ ಆಯ್ಕೆ ಕಾಣಲಿದೆ. ಪ್ರಯಾಣಕ್ಕಿಂತ ಮುಂಚಿತವಾಗಿ ಅಥವಾ ಪ್ರಯಾಣದ ಸಮಯದಲ್ಲೂ ಈ ಸವಲತ್ತನ್ನು ಬಳಸಿಕೊಳ್ಳಬಹುದು. ■